# ಗಂಗಾ

■ ವನರಾಗ ಶರ್ಮಾ

ನಾನು ಗಂಗೆ – ಅಂದರೆ ಇಷ್ಟೆ ಸಾಕು. ಜೀವನದಿಯಾಗಿ, ಭಕ್ತರ ನಂಬಿಕೆಯ ಕಾಮಧೇನುವೆನಿಸಿ ಮೂರ್ತವೋ ಅಮೂರ್ತವೋ ಆದ 'ಕಲ್ಪತರು, ಚಿಂತಾಮಣಿಯ ಖಣಿಯಾಗಿ' ಅವರವರ ಭಾವದಂತೆ ಅವರವರ ಮುಂದೆ ನಿಲ್ಲುತ್ತೇನೆ. ಎಲ್ಲರ ಮನಸ್ಸು ಧ್ಯಾನಸ್ಥವಾಗುತ್ತದೆ. ಹೌದು, ಹರಿಯ ಅಡಿಯಿಂದ, ಹರನ ಮುಡಿಯಿಂದ, ಇಳಿದಿಳಿದು, ಭಗೀರಥನ ಪ್ರಯತ್ನದಿಂದ, ಭೂಲೋಕದಲ್ಲಿ ಹರಿಯುತ್ತ ಪಾತಾಳಕ್ಕೆ ಸರಿದು ಸಗರರ ಉದ್ಧಾರ ಮಾಡಿ ಸಾಗರದಲ್ಲಿ ವಿಲೀನಳಾದ ಅಮರಗಂಗಾ, ಆಪಗಾ, ಜಾಹ್ನವಿ ಎಂದೆಲ್ಲ ಕರೆಸಿಕೊಳ್ಳುವ ಗಂಗೆ.

ನನ್ನ ಕಥೆ ಬಹುದೀರ್ಘ, ವಿಶಾಲ, ನಿಗೂಢ, ಅನಂತ. ಯಾಕೆಂದರೆ, ಅನಂತಕಾಲದಿಂದ ನಾನು ಹರಿಯುತ್ತಿದ್ದೇನೆ. ಮತ್ತೆ ದೇವತಾ ರೂಪಾಂತು ಬ್ರಹ್ಮಲೋಕದಲ್ಲೂ, ಸ್ವರ್ಗದಲ್ಲೂ ವಾಸ ಮಾಡುತ್ತೇನೆ. ಕಿರುತೊರೆಯ ರೂಹಿಂದ ಶಿವನ ಜಟಾಜೂಟದಲ್ಲೂ ವಾಸ ಮಾಡುತ್ತೇನೆ. ನಾನು ಮಹಾದೇವ, ಪರಶಿವನ ಹಿರಿಯ ಸತಿಯೂ ಹೌದು. ತಂಗಿ ಪಾರ್ವತಿಯನ್ನು ಪ್ರೀತಿಸುವ ಅಕ್ಕನೂ ಹೌದು. ವಾಮನ ತ್ರಿವಿಕ್ರಮನಾಗಿ ಒಂದು ಅಡಿಯನ್ನು ದೇವಲೋಕದಲ್ಲಿ ಇರಿಸಿದಾಗ, ಬ್ರಹ್ಮ ತನ್ನ ಕಮಂಡಲುವಿನ ನೀರಿನಿಂದ ಪಾದವನ್ನು ತೊಳೆದ. ಆ ಪವಿತ್ರ ತೀರ್ಥವನ್ನು ಬ್ರಹ್ಮ ಕಮಂಡಲದಲ್ಲಿ ತುಂಬಿದ. ತುಂಬಿ ಹೆಚ್ಚಾದ ತೀರ್ಥವನ್ನು ದುಃಖ–ಪಾಪಗಳನ್ನು ದೂರ ಮಾಡುವ 'ಗಂಗಾ' ಎಂದು ಕರೆದು, ಜಗತ್ತಿನ ಕಲ್ಯಾಣಕ್ಕೋಸ್ಕರ ಹಿಮಾಲಯದಲ್ಲಿ ಬಿಟ್ಟ. ಭಗೀರಥನ ತಪಸ್ಸಿಗೆ ಮೆಚ್ಚಿ ಭೋರ್ಗರೆದು ಧುಮ್ಮಿಕ್ಕಿದಾಗ, ಜಗತ್ತು ಧರಿಸಲಾಗದೆಂದು ಶಿವ ತನ್ನ ಜಟಾಜೂಟದಲ್ಲಿ ಧರಿಸಿದ. ಕಿರುಧಾರೆಯನ್ನು ಹರಿಸಿಬಿಟ್ಟ. ಅದೆಲ್ಲ ಸರಿ, ಈಗ ನಾನಿಲ್ಲಿ ಹೇಳುತ್ತಿರುವುದು ಮಹಾಭಿಷ ಮತ್ತು ನನ್ನ ಪ್ರಣಯದ ಕಥೆ ಮಾತ್ರ. 'ಗಂಗಾವತರಣ' ಎಂಬ ನನ್ನ ಅವತರಣ ಕಥೆಯನ್ನೂ, ಕಾರಣವನ್ನು ಇನ್ನೊಮ್ಮೆ ಎಂದಾದರೂ ಹೇಳುವೆ.

ಹೌದು, ಸುರಸುಂದರಿ ಎನಿಸಿಕೊಂಡ ನಾನು 'ನಾಲ್ಮೊಗನಸಭೆಯರಂಗಮಂಚದಲ್ಲಿನೃತ್ಯಮಾಡುತ್ತಿದ್ದೆ. ನಾನು ನೃತ್ಯದಲ್ಲಿ ಮೈಮರೆತಿದ್ದವಳಾಗಿದ್ದೆನೋ? ಅಥವಾ ಆ ಮನೋಹರನನ್ನು ನೋಡುತ್ತಲೋ? ಜೊತೆಗೇ ನರ್ತಿಸುತ್ತಿದ್ದ ಗೆಳತಿ ಗಂಧರ್ವಕನ್ಯೆ ಮಾಲಿನಿ ಪಿಸುಗುಟ್ಟಿದಳು; 'ಮಂದಾಕಿನಿ ನಿನ್ನ ಸೆರಗು ಜಾರಿದೆ'.

ತೆರತೆರನಾಗಿ ನನ್ನ ತರಲತರ ನಡುವನ್ನು ತಿವಿತಿವಿದು ಪಿಸುನುಡಿದಿದ್ದಳು ಸಖಿ. ಹೌದು, ಆ ಅಂದಗಾರನನ್ನು ನೋಡಿ ಮೈಮರೆತಿದ್ದೆ. ನನಗೆ ಸೆರಗು ಜಾರಿದ್ದು

